## ಕರ್ನಾಟಕ ವಿಧಾನ ಪರಿಷತ್ತು

ಮಾನ್ಯ ವಿಧಾನ ಪರಿಷತ್ತಿನ ಸದಸ್ಯರು : ಶ್ರೀ ಮುನಿರಾಜುಗೌಡ ಪಿ.ಎಂ.
ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 45
ಉತ್ತರಿಸಬೇಕಾದ ದಿನಾಂಕ : 04-07-2023
ಉತ್ತರಿಸಬೇಕಾದ ಸಚಿವರು : ಸಹಕಾರ ಸಚಿವರು

| ಕ್ರ.ಸಂ | ಪ್ರಶ್ನೆ | ಉತ್ತರ |
|---|---|---|
| ಅ) | ರಾಜ್ಯದ ಸಹಕಾರಿ ಬ್ಯಾಂಕ್‌ಗಳಿಂದ ರೈತರಿಗೆ ಶೂನ್ಯ ಬಡ್ಡಿದರದಲ್ಲಿ ಈ ಹಿಂದೆ ನೀಡುತ್ತಿದ್ದ ಸಾಲದ ಮೊತ್ತ ಎಷ್ಟು; ಸದರಿ ಮೊತ್ತವನ್ನು ಹೆಚ್ಚಿಸುವ ಪ್ರಸ್ತಾವನೆ ಸರ್ಕಾರದ ಮುಂದಿದೆಯೇ; ಹಾಗಿದ್ದಲ್ಲಿ, ಎಷ್ಟು ಪ್ರಮಾಣದಲ್ಲಿ ಹೆಚ್ಚಿಸಲಾಗುವುದು; | 2022-23 ನೇ ಸಾಲಿನಲ್ಲಿ ಸಹಕಾರ ಸಂಘ/ಬ್ಯಾಂಕುಗಳು ರೈತರಿಗೆ ಶೂನ್ಯ ಬಡ್ಡಿ ದರ ಅನ್ವಯವಾಗುವಂತೆ ವಿತರಿಸುವ ಅಲ್ಪಾವಧಿ ಕೃಷಿ ಸಾಲದ ಗರಿಷ್ಟ ಮಿತಿ ರೂ.3.00 ಲಕ್ಷಗಳಾಗಿರುತ್ತದೆ.<br><br>ಸದರಿ ಮೊತ್ತವನ್ನು ಹೆಚ್ಚಿಸುವ ಪ್ರಸ್ತಾವನೆ ಸರ್ಕಾರದ ಪರಿಶೀಲನೆಯಲ್ಲಿದೆ. |
| ಆ) | ಸಹಕಾರಿ ಬ್ಯಾಂಕ್‌ಗಳಿಂದ ಈ ಹಿಂದೆ ನೀಡುತ್ತಿದ್ದ ದೀರ್ಘಾವಧಿ ಸಾಲದ ಪ್ರಮಾಣ ಎಷ್ಟು; ಸದರಿ ಮೊತ್ತವನ್ನು ಹೆಚ್ಚಿಸುವ ಪ್ರಸ್ತಾವನೆ ಸರ್ಕಾರದ ಮುಂದಿದೆಯೇ; ಹಾಗಿದ್ದಲ್ಲಿ, ಎಷ್ಟು ಮೊತ್ತವನ್ನು ಹೆಚ್ಚಿಸಲಾಗುವುದು; | 2022-23 ನೇ ಸಾಲಿನಲ್ಲಿ ಸಹಕಾರ ಸಂಘ/ಬ್ಯಾಂಕುಗಳು ರೈತರಿಗೆ ಶೇ.3 ರ ಬಡ್ಡಿ ದರ ಅನ್ವಯವಾಗುವಂತೆ ವಿತರಿಸುವ ಮಧ್ಯಮಾವಧಿ ಹಾಗೂ ದೀರ್ಘಾವಧಿ ಕೃಷಿ ಸಾಲದ ಗರಿಷ್ಟ ಮಿತಿ ರೂ.10.00 ಲಕ್ಷಗಳಾಗಿರುತ್ತದೆ.<br><br>ಸದರಿ ಮೊತ್ತವನ್ನು ಹೆಚ್ಚಿಸುವ ಪ್ರಸ್ತಾವನೆ ಸರ್ಕಾರದ ಪರಿಶೀಲನೆಯಲ್ಲಿದೆ. |
| ಇ) | ಕೃಷಿ ಸಾಲದ ಗುರಿಯನ್ನು ಹೆಚ್ಚಿಸುವ ಉದ್ದೇಶ ಸರ್ಕಾರದ ಮುಂದಿದೆಯೇ; ಇದ್ದಲ್ಲಿ, ಯಾವ ಪ್ರಮಾಣದಲ್ಲಿ ಹೆಚ್ಚಿಸಲಾಗುವುದು; | 2022-23 ನೇ ಸಾಲಿನಲ್ಲಿ 33 ಲಕ್ಷ ರೈತರಿಗೆ ರೂ.24,000 ಕೋಟಿ ಸಾಲ ವಿತರಿಸಲು ನಿಗದಿಪಡಿಸಿದ ಗುರಿಗೆ ಎದುರಾಗಿ ಸಹಕಾರ ಸಂಘಗಳು 30.11 ಲಕ್ಷ ರೈತರಿಗೆ ರೂ.23,529.70 ಕೋಟಿ ಕೃಷಿ ಸಾಲ ವಿತರಿಸಿರುತ್ತವೆ.<br><br>2023-24 ನೇ ಸಾಲಿಗೆ ಡಿಸಿಸಿ ಬ್ಯಾಂಕುಗಳು ಮತ್ತು ಪ್ಯಾಕ್ಸ್ ಗಳು ಕಳೆದ ಮೂರು ವರ್ಷಗಳ ಸರಾಸರಿ ಸಾಲ ವಿತರಣೆ ಆಧಾರವಾಗಿ 33.98 ಲಕ್ಷ ರೈತರಿಗೆ ರೂ.22,994.09 ಕೋಟಿ ಅಲ್ಪಾವಧಿ ಕೃಷಿ ಸಾಲ ಮತ್ತು 32,916 ರೈತರಿಗೆ ರೂ.1179.49 ಕೋಟಿ ಮಧ್ಯಮಾವಧಿ ಹಾಗೂ ದೀರ್ಘಾವಧಿ ಕೃಷಿ ಸಾಲ ಹಾಗೂ ಕಸ್ಕಾರ್ಡ್ ಬ್ಯಾಂಕಿನಿಂದ 15,000 ರೈತರಿಗೆ ರೂ.456.00 ಕೋಟಿಗಳ ದೀರ್ಘಾವಧಿ ಕೃಷಿ ಸಾಲ ಹೀಗೆ ಒಟ್ಟು 34.46 ಲಕ್ಷ ರೈತರಿಗೆ ರೂ.24,629.58 ಕೋಟಿಗಳ ಕೃಷಿ ಸಾಲ ವಿತರಿಸಲು ಗುರಿ ನಿಗದಿಪಡಿಸಿಕೊಳ್ಳಲಾಗಿದೆ. |

| | | |
|---|---|---|
| ಈ) | ಪ್ರಸಕ್ತ ಸಾಲಿನಲ್ಲಿ ಸಾಲಕ್ಕಾಗಿ ರೈತರಿಂದ ಬಂದ ಬೇಡಿಕೆ ಎಷ್ಟು; (ಜಿಲ್ಲಾವಾರು ವಿವರ ನೀಡುವುದು) ಸಾಲ ಮಂಜೂರು ಮಾಡಿದ ಮೊತ್ತವೆಷ್ಟು: ಉಳಿದ ರೈತರಿಗೆ ಸಾಲ ಮಂಜೂರು ಮಾಡಲು ಸರ್ಕಾರ ಕೈಗೊಂಡ ಕ್ರಮಗಳೇನು? | 2023-24 ನೇ ಸಾಲಿನಲ್ಲಿ ಪತ್ತಿನ ಸಹಕಾರ ಸಂಘಗಳಲ್ಲಿ ನಿಗದಿತ ಅವಧಿಯೊಳಗೆ ಮರುಪಾವತಿಸಿದ 4,75,585 ರೈತರು ಪುನಃ ಸಾಲ ಪಡೆಯಲು ಅರ್ಜಿ ಸಲ್ಲಿಸಿದ್ದು, ಈ ಎಲ್ಲ ರೈತರಿಗೂ ತಹಲ್‌ವರೆಗೆ ಮರು ಸಾಲ ವಿತರಿಸಲಾಗಿದೆ. 28,745 ರೈತರು ಹೊಸದಾಗಿ ಕೃಷಿ ಸಾಲ ಪಡೆಯಲು ಅರ್ಜಿ ಸಲ್ಲಿಸಿದ್ದು, ಈ ಪೈಕಿ 22,089 ರೈತರಿಗೆ ತಹಲ್‌ವರೆಗೆ ಸಾಲ ವಿತರಿಸಿದ್ದು, 6647 ರೈತರಿಗೆ ಮಾತ್ರ ಸಾಲ ವಿತರಿಸಲು ಬಾಕಿ ಇರುತ್ತದೆ. (ಜಿಲ್ಲಾವಾರು ವಿವರವನ್ನು **ಅನುಬಂಧ-1** ರಲ್ಲಿ ನೀಡಲಾಗಿದೆ.)<br><br>ಸಹಕಾರ ಸಂಘಗಳಲ್ಲಿ ಹಿಂದಿನ ಆರ್ಥಿಕ ವರ್ಷದಲ್ಲಿ ಸಾಲ ಪಡೆದ ರೈತರು ಸಾಲವನ್ನು ಮರುಪಾವತಿಸಲು ಮಾರ್ಚ್ 2024 ರವರೆಗೆ ಗಡುವು ಇದ್ದು, ಈ ಅವಧಿಯಲ್ಲಿ ಸಾಮಾನ್ಯವಾಗಿ ಮರು ಸಾಲ ವಿತರಿಸಲಾಗುತ್ತದೆ. ಹೊಸದಾಗಿ ಅರ್ಜಿ ಬಂದ ಸದಸ್ಯರಿಗೆ ನಬಾರ್ಡ್‌ನ ಪುನರ್ಧನ ಹಾಗೂ ಡಿಸಿಸಿ ಬ್ಯಾಂಕಿನ ಸಂಪನ್ಮೂಲ ಆಧರಿಸಿ ಹೊಸ ರೈತರಿಗೆ ಸಾಲ ನೀಡಲಾಗುತ್ತಿದೆ.<br><br>ಪ್ರತೀ ವರ್ಷ ಹೊಸ ಸದಸ್ಯರಿಗೆ ಶೇ.25 ರಷ್ಟು ಸಾಲ ವಿತರಿಸಲು ಇಲಾಖೆಯಿಂದ ಮಾನದಂಡ ನಿಗದಿಪಡಿಸಿಕೊಳ್ಳುತ್ತಿದ್ದು, ಅದರಂತೆ ಕ್ರಮವಿಡಲಾಗುತ್ತಿದೆ. |

**ಸಂಖ್ಯೆ: ಸಿಒ 132 ಸಿಎಲ್‌ಎಸ್ 2023**

K. N. Rajanna

(ಕೆ.ಎನ್. ರಾಜಣ್ಣ)
**ಸಹಕಾರ ಸಚಿವರು**

ಪತ್ತಿನಸದಸ್ಯರಾದ ಮಾನ್ಯ ಶ್ರೀ ಮುನಿರಾಜುಗೌಡ ಪಿ ಎಂ (ವಿಧಾನಸಭೆಯಿಂದಚುನಾಯಿತರಾದವರು) ಇವರ ಚು
ಗುರುತಿಲ್ಲದ ಪ್ರಶ್ನೆ ಸಂಖ್ಯೆ:45 ಕ್ಕೆ ಅನುಬಂಧ

ನೇ ಸಾಲಿನಲ್ಲಿ ಸಹಕಾರ ಸಂಘಗಳಲ್ಲಿ ಸಾಲಕ್ಕಾಗಿ ರೈತರಿಂದ ಬಂದ ಅರ್ಜಿ ಮತ್ತು ಸಾಲ ವಿತರಿಸಿದ ರೈತರ ವಿವರ

| ಕ್ರಮ ಸಂಖ್ಯೆ | ಜಿಲ್ಲೆಯ ಹೆಸರು | ಅರ್ಜಿ ಸ್ವೀಕರಿಸಿದ ರೈತರ ಸಂಖ್ಯೆ | | ಸಾಲ ವಿತರಿಸಿದ ರೈತರ ಸಂಖ್ಯೆ | | ಸಾಲ ವಿತರಿಸಲು ಬಾಕಿ ಇರುವ ರೈತರ ಸಂಖ್ಯೆ | |
|---|---|---|---|---|---|---|---|
| | | ಹಳೆ ಸದಸ್ಯರು | ಹೊಸ ಸದಸ್ಯರು | ಹಳೆ ಸದಸ್ಯರು | ಹೊಸ ಸದಸ್ಯರು | ಹಳೆ ಸದಸ್ಯರು | ಹೊಸ ಸದಸ್ಯರು |
| 1 | ಬಾಗಲಕೋಟೆ | 33465 | 294 | 33465 | 294 | 0 | 0 |
| 2 | ಬೆಳಗಾವಿ | 103580 | 5681 | 103580 | 5681 | 0 | 0 |
| 3 | ಬೆಂಗಳೂರು ನಗರ | 514 | 0 | 514 | 0 | 0 | 0 |
| 4 | ಬೆಂಗಳೂರು ಗ್ರಾಮಾಂತರ | 1841 | 0 | 1841 | 0 | 0 | 0 |
| 5 | ವಿಜಯಪುರ | 16928 | 1353 | 16928 | 1353 | 0 | 0 |
| 6 | ಬೀದರ | 7099 | 1763 | 7099 | 497 | 0 | 1266 |
| 7 | ಶಿವಮೊಗ್ಗ | 20081 | 3 | 20081 | 3 | 0 | 0 |
| 8 | ಮಂಡ್ಯ | 1645 | 1237 | 1645 | 1237 | 0 | 0 |
| 9 | ಮೈಸೂರು | 6543 | 411 | 6543 | 411 | 0 | 0 |
| 10 | ಯಾದಗೀರ | 1608 | 664 | 1608 | 0 | 0 | 664 |
| 11 | ಚಿಕ್ಕಬಳ್ಳಾಪುರ | 1596 | 400 | 1596 | 96 | 0 | 295 |
| 12 | ಚಿಕ್ಕಮಗಳೂರು | 57878 | 60 | 57878 | 23 | 0 | 37 |
| 13 | ಚಿತ್ರದುರ್ಗ | 1444 | 93 | 1444 | 73 | 0 | 20 |
| 14 | ರಾಮನಗರ | 3101 | 0 | 3101 | 0 | 0 | 0 |
| 15 | ರಾಯಚೂರು | 8263 | 243 | 8263 | 243 | 0 | 0 |
| 16 | ಉಡುಪಿ | 1645 | 96 | 1645 | 96 | 0 | 0 |
| 17 | ಹಾಸನ | 6111 | 32 | 6111 | 32 | 0 | 0 |
| 18 | ಹಾವೇರಿ | 2367 | 76 | 2367 | 76 | 0 | 0 |
| 19 | ಕಲಬುರಗಿ | 5334 | 3928 | 5334 | 0 | 0 | 3928 |
| 20 | ಕೊಪ್ಪಳ | 2911 | 41 | 2911 | 41 | 0 | 0 |
| 21 | ಕಾರವಾರ | 33942 | 772 | 33942 | 759 | 0 | 13 |
| 22 | ಕೋಲಾರ | 968 | 574 | 968 | 180 | 0 | 394 |
| 23 | ಕೊಡಗು | 12008 | 224 | 12008 | 224 | 0 | 0 |
| 24 | ಗದಗ | 2234 | 87 | 2234 | 87 | 0 | 0 |
| 25 | ತುಮಕೂರು | 20519 | 79 | 20519 | 49 | 0 | 30 |
| 26 | ಚಾಮರಾಜನಗರ | 1661 | 528 | 1661 | 528 | 0 | 0 |
| | ದಾವಣಗೆರೆ | 101965 | 9667 | 101965 | 9667 | 0 | 0 |
| | ದಕ್ಷಿಣ ಕನ್ನಡ | 12673 | 370 | 12673 | 370 | 0 | 0 |
| | ಧಾರವಾಡ | 3656 | 69 | 3656 | 69 | 0 | 0 |
| | ಬಳ್ಳಾರಿ | 2005 | 0 | 2005 | 0 | 0 | 0 |
| | | **475585** | **28745** | **475585** | **22089** | **0** | **6647** |

L Sarala

ಸಹಕಾರ ಸಂಘಗಳ ಸಹಾಯಕ ನಿಬಂಧಕರು(...)